## <u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

## <u>ಸಿ.ಸಿ.ನಂಃ**416/2023**</u>

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಆರಕ್ಷಕ ಉಪ-ನಿರೀಕ್ಷಕರು,
ಮೂಡಬಿದ್ರೆ ಪೊಲೀಸ್ ಠಾಣೆ, ಮೂಡಬಿದ್ರೆ.

-ವಿರುದ್ಧ-

ಆರೋಪಿತರು ಃ

1. ಜೀವನ್ ಕಿರಣ್ ಡೀಲೀಮ
ಪ್ರಾಯ **42** ವರ್ಷ,
ತಂದೆ ಪೌಲ್ ಡೀಲೀಮ,
ವಾಸಃ **2-83**, ಲೀಮಾ ಹೌಸ್,
ಬಿರಾವು ಹೊಸಬೆಟ್ಟು ಗ್ರಾಮ
ಮತ್ತು ಅಂಚೆ, ಹೊಸಬೆಟ್ಟು,
ಮೂಡಬಿದ್ರೆ.

2. ರೀಟಾ ಕುಟಿನ್ಹಾ
ಪ್ರಾಯ **62** ವರ್ಷ,
ಕೊಂ ದಿವಂಗತ ಸಲ್ವೋದರ ಕುಟಿನ್ಹಾ,
ವಾಸಃ ಶೈನಿಂಗ್ ಸ್ಟಾರ್,
ಹೊಸಬೆಟ್ಟು ಅಂಚೆ ಮತ್ತು ಗ್ರಾಮ,
ಮೂಡಬಿದ್ರೆ.

3. ಶ್ರೀಮತಿ ನೆಲ್ಲಿ ಮೋನಿಸ್
ಪ್ರಾಯ **79** ವರ್ಷ,
ಕೊಂ ಅಲೆಕ್ಸ್ ಮೋನಿಸ್,
ವಾಸಃ ಬಿರಾವು ಹೌಸ್,
ರೋಯಲ್ ಸ್ಟಾರ್ ಹೌಸ್,
ಹೊಸಬೆಟ್ಟು ಅಂಚೆ ಮತ್ತು ಗ್ರಾಮ,
ಮೂಡಬಿದ್ರೆ ತಾಲೂಕು.

## ಃ<u>ದೋಷಾರೋಪಣೆಃ</u>

**ಕು.ಮಾಲಾ ಸಿ.,** ಬಿ.ಎ., ಎಲ್.ಎಲ್.ಎಂ., ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ., ಮೂಡಬಿದ್ರೆ ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ **06-10-2022** ರಂದು ಬೆಳಿಗ್ಗೆ **11.00** ಗಂಟೆಗೆ ಮೂಡಬಿದ್ರೆ ಠಾಣಾ ಸರಹದ್ದಿನಲ್ಲಿ, **1** ನೇ ಸಾಕ್ಷಿದಾರರಾದ ಹೆಚ್.ಬಿ.ಮಂಜುನಾಥರವರು **2** ರಿಂದ **4** ನೇ ಸಾಕ್ಷಿದಾರರು ಕ್ರಮವಾಗಿ ಸತೀಶ್ ಕೆ., ಶ್ರೀಮತಿ ಅಪೂರ್ವ ಮತ್ತು

ಉಮೇಶ್ ರವರೊಂದಿಗೆ ಮಾನ್ಯ ಮೂಡಬಿದ್ರೆ ತಹಶೀಲ್ದಾರರ ಆದೇಶದಂತೆ ಮೂಡಬಿದ್ರೆ ತಾಲೂಕು, ಹೊಸಬೆಟ್ಟು ಗ್ರಾಮದ ಬಿರಾವು ಎಂಬಲ್ಲಿಗೆ ಸರ್ವೆ ಕಾರ್ಯ ನಡೆಸಲು ಹೋದಾಗ ನೋಟೀಸುದಾರರಾದ ಆರೋಪಿಗಳು ಸ್ಥಳದಲ್ಲಿ ಹಾಜರಿಲ್ಲದಿರುವುದನ್ನು ಕಂಡು 1 ನೇ ಸಾಕ್ಷಿದಾರರು ಆರೋಪಿಗಳನ್ನು ಮೊಬೈಲ್ ಫೋನಿನ ಮೂಲಕ ಸಂಪರ್ಕಿಸಿದಾಗ ಹೊಸಬೆಟ್ಟು ಗ್ರಾಮದ ಸರ್ವೆ ನಂಬ್ರ 198 ರ ಮೀಸಲು ಅರಣ್ಯ ಪ್ರದೇಶಕ್ಕೆ ಬರುವಂತೆ ಆರೋಪಿಗಳು ತಿಳಿಸಿದ್ದು, 1 ರಿಂದ 4 ನೇ ಸಾಕ್ಷಿದಾರರು ಸದರಿ ಸ್ಥಳಕ್ಕೆ 11.15 ಗಂಟೆಗೆ ಹೋದಾಗ ಅಲ್ಲಿ ಹಾಜರಿದ್ದ ಆರೋಪಿಗಳು ತಕ್ಷೀರು ಮಾಡುವ ಸಮಾನ ಉದ್ದೇಶದಿಂದ 1 ರಿಂದ 4 ನೇ ಸಾಕ್ಷಿದಾರರಿಗೆ ಸರ್ವೆ ಕೆಲಸಗಳನ್ನು ಮಾಡಲು ಅಡ್ಡಿಪಡಿಸಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 353 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಸಾಕ್ಷಿದಾರರು ತಾವುಗಳು ಸರಕಾರಿ ಕೆಲಸವನ್ನು ಮಾಡಲು ಬಂದಿದ್ದು ಸದರಿ ಕೆಲಸಕ್ಕೆ ಅಡ್ಡಿಪಡಿಸದಂತೆ ತಿಳುವಳಿಕೆಯನ್ನು ನೀಡಿದರೂ ಕೂಡಾ 1 ನೇ ಆರೋಪಿಯಾದ ಜೀವನ್ ಕಿರಣ್ ಡೀಲೀಮ ಕತ್ತಿಯನ್ನು ಹಾಗೂ 2 ನೇ ಆರೋಪಿಯಾದ ರೀಟಾ ಕುಟಿನ್ಹಾ ದೊಣ್ಣೆಯನ್ನು ಹಿಡಿದುಕೊಂಡು ಬಂದು "ಯಾವುದೇ ಸರ್ವೆ ಕೆಲಸವನ್ನು ಮಾಡಬಾರದು, ಸರ್ವೆ ಕೆಲಸವನ್ನು ಮಾಡಿದರೆ ನೀವು ಹಿಂದಕ್ಕೆ ಹೋಗುವುದಿಲ್ಲ" ಎಂದು ಜೀವ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ನಿಮ್ಮ ಮೇಲಿನ ಆರೋಪದ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

Sd/-

ದಿನಾಂಕಃ 08-11-2023

(ಮಾಲಾ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

<u>ಸಿ.ಸಿ.ನಂಃ**416/2023**</u>

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಆರಕ್ಷಕ ಉಪ-ನಿರೀಕ್ಷಕರು, ಮೂಡಬಿದ್ರೆ ಪೊಲೀಸ್ ಠಾಣೆ, ಮೂಡಬಿದ್ರೆ.

-ವಿರುದ್ಧ-

ಆರೋಪಿತ ಃ 1) ಜೀವನ್ ಕಿರಣ್ ಡೀಲೀಮ, 42 ವರ್ಷ,

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿ ಆರೋಪಿಯ ಹೇಳಿಕೆ</u>**

<u>ಪ್ರಶ್ನೆ 1</u>ಃ ನಿಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ಅರ್ಥವಾಯಿತೇ?

<u>ಉತ್ತರಃ</u> ಅರ್ಥವಾಯಿತು

<u>ಪ್ರಶ್ನೆ 2</u>ಃ ನಿಮ್ಮ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀವು ಸಮ್ಮತಿಸುವಿರೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಛಿಸುವಿರೋ?

<u>ಉತ್ತರಃ</u> ಸುಳ್ಳು, ವಿಚಾರಣೆಯಾಗಬೇಕಾಗಿದೆ

(ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿಗಿಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಲಾಗಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಥಾವತ್ ಹೇಳಿಕೆಯನ್ನು ದಾಖಲು ಮಾಡಲಾಯ್ತು.)

Sd/-

ದಿನಾಂಕಃ 08-11-2023

**(ಮಾಲಾ ಸಿ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

<u>ಸಿ.ಸಿ.ನಂಃ**416/2023**</u>

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಆರಕ್ಷಕ ಉಪ-ನಿರೀಕ್ಷಕರು, ಮೂಡಬಿದ್ರೆ ಪೊಲೀಸ್ ಠಾಣೆ, ಮೂಡಬಿದ್ರೆ.

-ವಿರುದ್ಧ-

ಆರೋಪಿತ ಃ 2) ರೀಟಾ ಕುಟಿನ್ಹಾ, 62 ವರ್ಷ,

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿ ಆರೋಪಿಯ ಹೇಳಿಕೆ</u>**

<u>ಪ್ರಶ್ನೆ 1</u>ಃ ನಿಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ಅರ್ಥವಾಯಿತೇ?

<u>ಉತ್ತರಃ</u> ಅರ್ಥವಾಯಿತು

<u>ಪ್ರಶ್ನೆ 2</u>ಃ ನಿಮ್ಮ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀವು ಸಮ್ಮತಿಸುವಿರೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಛಿಸುವಿರೋ?

<u>ಉತ್ತರಃ</u> ಸುಳ್ಳು, ವಿಚಾರಣೆಯಾಗಬೇಕಾಗಿದೆ

(ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿಗಿಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಲಾಗಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಥಾವತ್ ಹೇಳಿಕೆಯನ್ನು ದಾಖಲು ಮಾಡಲಾಯ್ತು.)

Sd/-

ದಿನಾಂಕಃ 08-11-2023

**(ಮಾಲಾ ಸಿ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

<u>ಸಿ.ಸಿ.ನಂಃ**416/2023**</u>

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಆರಕ್ಷಕ ಉಪ-ನಿರೀಕ್ಷಕರು,
ಮೂಡಬಿದ್ರೆ ಪೊಲೀಸ್ ಠಾಣೆ, ಮೂಡಬಿದ್ರೆ.

-ವಿರುದ್ಧ-

ಆರೋಪಿತ ಃ **3)** ಶ್ರೀಮತಿ ನೆಲ್ಲಿ ಮೋನಿಸ್**, 79** ವರ್ಷ**,**

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿ ಆರೋಪಿಯ ಹೇಳಿಕೆ</u>**

<u>ಪ್ರಶ್ನೆ **1**</u>ಃ ನಿಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ಅರ್ಥವಾಯಿತೇ**?**

<u>ಉತ್ತರಃ</u> ಅರ್ಥವಾಯಿತು

<u>ಪ್ರಶ್ನೆ **2**</u>ಃ ನಿಮ್ಮ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀವು ಸಮ್ಮತಿಸುವಿರೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಛಿಸುವಿರೋ**?**

<u>ಉತ್ತರಃ</u> ಸುಳ್ಳು**,** ವಿಚಾರಣೆಯಾಗಬೇಕಾಗಿದೆ

(ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿಗಿಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಲಾಗಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಥಾವತ್ ಹೇಳಿಕೆಯನ್ನು ದಾಖಲು ಮಾಡಲಾಯ್ತು.)

Sd/-
ದಿನಾಂಕಃ **08-11-2023** **(ಮಾಲಾ ಸಿ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**,**
ಮೂಡಬಿದ್ರೆ